"ಲೋಕರಾಜ್ಯ" - ಪ್ರಜಾರಾಜ್ಯ ಸಂಚಿಕೆ

ಭಾರತದ ಸಾರ್ವಭೌಮ ಲೋಕಸತ್ತಾತ್ಮಕ ಪ್ರಜಾರಾಜ್ಯ

ಗುರುವಾರ, ಜನೆವರಿ ೨೬, ೧೯೫೦

*

ಡಾ. ರಾಜೇಂದ್ರ ಪ್ರಸಾದ



ಪಂ. ಜವಾಹರಲಾಲ ನೆಹರೂ

ಘಟನೆಯ ಗೊತ್ತುಗುರಿಗಳು

(೧) ಹಿಂದುಸ್ತಾನವನ್ನು ಸಾರ್ವಭೌಮ ಲೋಕಸತ್ತಾತ್ಮಕ ಪ್ರಜಾರಾಜ್ಯವನ್ನಾಗಿ ನಿರ್ಮಿಸುವದು.

(೨) ಎಲ್ಲ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ದೊರಕಿಸಿಕೊಡುವದು.

(೩) ಜನತೆಯ ವಿಚಾರ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ನಂಬುಗೆ, ಮತ ಪಂಥ ಮತ್ತು ಪೂಜೆಯ ಸ್ವಾತಂತ್ರ್ಯ ಇವುಗಳನ್ನು ಸಂರಕ್ಷಿಸುವದು.

(೪) ಸ್ಥಾನಮಾನ ಹಾಗು ಸಂಧಿ ಅವಕಾಶಗಳಲ್ಲಿ ಸಮತೆಯನ್ನು ಪ್ರಸ್ಥಾಪಿಸುವದು.

(೫) ಜನತೆಯಲ್ಲಿ ಬಂಧು ಬಾಂಧವ್ಯವನ್ನು ಬೆಳೆಯಿಸುವದು.

(೬) ವ್ಯಕ್ತಿಯ ಗೌರವವನ್ನೂ ರಾಷ್ಟ್ರದ ಒಕ್ಕೂಟವನ್ನೂ ಕಾಪಾಡುವದು.

ಮೂಲಭೂತ ಹಕ್ಕುಗಳು

(೧) ನಾಗರಿಕ ಮತ್ತು ಸಾಮಾಜಿಕ ಸಮತೆ.

(೨) ಸ್ವಾತಂತ್ರ್ಯದ ಹಕ್ಕು.

(೩) ಶೋಷಣೆಯಾಗದಂತೆ ಸಂರಕ್ಷಣೆಯ ಹಕ್ಕು.

(೪) ಬೇಕಾದ ಧರ್ಮವನ್ನು ಸ್ವೀಕರಿಸಲು, ಆಚರಿಸಲು, ಪ್ರಚಾರಗೊಳಿಸಲು ಸ್ವಾತಂತ್ರ್ಯ.

(೫) ಸಾಂಸ್ಕೃತಿಕ ಹಾಗು ಶೈಕ್ಷಣಿಕ ಹಕ್ಕು ಬಾಧ್ಯತೆಗಳು.

(೬) ಆಸ್ತಿಪಾಸ್ತಿಯ ಹಕ್ಕು.

(೭) ಘಟನಾತ್ಮಕ ಉಪಾಯಗಳ ವಿಷಯದಲ್ಲಿ ಹಕ್ಕು.

ಶ್ರೀ. ರಾಜಗೋಪಾಲಾಚಾರ್ಯರು

ಸರದಾರ ವಲ್ಲಭಭಾಯಿ ಪಟೇಲ



ಸ್ವಾತಂತ್ರ್ಯದ ಆಗುಹೋಗುಗಳಲ್ಲಿ ನಮ್ಮ ಶಕ್ತಿಸಾಮರ್ಥ್ಯಗಳನ್ನೂ ದೊಡ್ಡ ದೊಡ್ಡ ಗಂಡಾಂತರಗಳಿಗೆ ಎದೆಗೊಡುವ ಎದೆಗಾರಿಕೆಯನ್ನೂ ಅವಲಂಬಿಸಿವೆ.

ದೀನದಲಿತರ ಸ್ವಾತಂತ್ರ್ಯವೇ ನಿಜವಾದ ಸ್ವಾತಂತ್ರ್ಯವೆಂದು ನಾನು ತಿಳಿಯುತ್ತೇನೆ. ಹಿಂದುಸ್ತಾನವು ಕೇವಲ ಆಂಗ್ಲರ ದಾಸ್ಯದ ನೊಗವನ್ನು ಬಿಸುಟಿದರೆ ಸಾಲದು. ಅದು ಎಲ್ಲ ತರದ ದಾಸ್ಯದಿಂದ ಪಾರಾಗಬೇಕು.

—ಮಹಾತ್ಮಾ ಗಾಂಧೀ

*



Boom-5

ಕಾರ್ಯನಿರತ ಹಿಂದೀ ಘಟನಾ ಸಮಿತಿ



ಡಿಸೆಂಬರ, ೧೯೪೬ ರಲ್ಲಿ ಹಿಂದೀ ಘಟನಾ ಸಮಿತಿಯ ಮೊದಲನೇ ಅಧಿವೇಶನದಲ್ಲಿ ಪಂಡಿತ ನೆಹರೂರವರು ಭಾಷಣ ಮಾಡುತ್ತಿದ್ದಾಗ ತೆಗೆದ ಚಿತ್ರ. ಘಟನಾ ಸಮಿತಿಯ ತಾತ್ಕಾಲಿಕ ಅಧ್ಯಕ್ಷರಾಗಿದ್ದ ಡಾ. ಸಚ್ಚಿದಾನಂದ ಸಿಂಹರು ಅಂದು ಅಧ್ಯಕ್ಷತೆ ವಹಿಸಿದ್ದರು.

ಶ್ರೀ. ಎನ್. ಗೋಪಾಲಸ್ವಾಮಿ ಅಯ್ಯಂಗಾರ

ಡಾ. ಬಿ. ಆರ್. ಅಂಬೇಡಕರ
(ಅಧ್ಯಕ್ಷ)

ಶ್ರೀ. ಕೆ. ಎಂ. ಮುನಶಿ

B-I

ಘಟನೆಯ ಬರೆಹಗಾರ ಸಮಿತಿಯ ಸದಸ್ಯರು

ಶ್ರೀ. ಟಿ. ಟಿ. ಕೃಷ್ಣಮಾಚಾರಿ

ಸಯ್ಯದ ಮಹಮ್ಮದ ಸಾದುಲ್ಲಾ



ಶ್ರೀ. ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ



"ಎಲ್ಲರಿಗೂ ಸ್ವಾತಂತ್ರ್ಯ ಹಾಗು ಮಾನವಕೋಟಿಗೆ ಶಾಂತಿ ದೊರಕುವಂತೆ ನಾವು ಯತ್ನಿಸಬೇಕೆಂಬುದೊಂದೇ ನಮ್ಮ ಮಹತ್ವಾಕಾಂಕ್ಷೆ," ಹೀಗೆಂದು ಡಾ. ರಾಜೇಂದ್ರ ಪ್ರಸಾದರು ಆಗಸ್ಟ ೧೪-೧೫, ೧೯೪೭ ರ ಮಧ್ಯರಾತ್ರಿ ನೆರೆದ ಘಟನಾ ಸಮಿತಿಯ ಇತಿಹಾಸ ಪ್ರಸಿದ್ಧ ಅಧಿವೇಶನದಲ್ಲಿ ಹೇಳಿದರು. ಅದೇ ಸಮಯದಲ್ಲಿ ಭಾರತಕ್ಕೆ ಪ್ರಭುತ್ವವು ನಿರ್ಗಾಯಿಸಲ್ಪಟ್ಟಿತು.